(6ನೇ ಪುಟದಿಂದ)

ಸಂಪೂರ್ಣವಾಗಿ ಚಿತ್ರಕಲೆಗೆ ತಮ್ಮನ್ನು ಅರ್ಪಿಸಿಕೊಂಡರು. ಆರಂಭದ ದಿನಗಳಲ್ಲಿ ಗಾಂಧಿ ಭವನದಲ್ಲಿ ತರಬೇತಿ ನಡೆಯುತ್ತಿತ್ತು. ಚಿತ್ರಕಲಾ ಪರಿಷತ್ತಿನಲ್ಲಿ ತರಬೇತಿ ನಡೆಯಿತು.

'ಮೊದಲಿಗೆ ಒಂದು ದೊಡ್ಡ ಕಾರ್ಡ್‌ಬೋರ್ಡ್‌ಗೆ ಗಮ್ ಹಾಕಬೇಕು. ಅದರ ಮೇಲೆ ಬಿಳಿ ಪೇಪರ್‌ಅನ್ನು ಗಾಳಿಯಾಡದ ಹಾಗೆ ಅಂಟಿಸಬೇಕು. ನಂತರ ನಮ್ಮ ಕಲ್ಪನೆಯ ಮೂರ್ತಿಯ ಚಿತ್ರವನ್ನು ಬಿಳಿಹಾಳೆಯ ಮೇಲೆ ಬರೆದುಕೊಳ್ಳಬೇಕು. ಇನ್ನು ಮುಂದಿನ ಕುಸುರಿ ಕೆಲಸ ಬಹಳ ಮುಖ್ಯ. ಅದೇ ಈ ಕಲೆಗೆ ಜೀವಾಳ ಅದೇ. ಜೆಸ್ಸೋ ವರ್ಕ್' ಎಂದು ವಿವರಿಸುತ್ತಾರೆ ಪದ್ಮಾ.

**'ಜೆಸ್ಸೋ' ವಿಶೇಷ**

ಚಾಕ್ ಪೌಡರ್, ಗ್ಯಾಂಬುಸ್– ಮರದ ತುಂಡಿನ ತರಹದ ವಸ್ತು (ನೈಸರ್ಗಿಕ ಡೈ) ಮತ್ತು ಗಮ್ (ಮರವಜ್ರ) ಅಥವಾ ಅರಾಬಿಕ್ ಗಮ್ (ಕ್ರಿಸ್ಟಲ್)ಅನ್ನು ಚೆನ್ನಾಗಿ ಅರೆಯಬೇಕು. ಚೆನ್ನಾಗಿ ಅರೆದ ವಸ್ತುವೇ ಜೆಸ್ಸೋ. ಇದನ್ನು ದೇವರಿಗೆ ಆಭರಣ ತೊಡಿಸುವ ಕಡೆ ಹಾಕಬೇಕು.

ಮೊದಲು ಬಿಳಿ ಹಾಳೆಯಲ್ಲಿ ದೇವರ ಚಿತ್ರ ಬರೆದುಕೊಳ್ಳಬೇಕು. ನಂತರ ಕೊರಳ ಹಾರ, ಕಿರೀಟ, ಕೈ ಬಳೆ, ಕಾಲ್ಗೆಜ್ಜೆ, ಸೊಂಟಪಟ್ಟಿ– ಹೀಗೆ ಆಭರಣ ತೊಡಿಸುವ ಜಾಗಗಳಲ್ಲಿ ಜೆಸ್ಸೋ ಹಾಕಬೇಕು. ಮೊದಲೇ ಕತ್ತರಿಸಿಟ್ಟ ಚಿನ್ನದ ಹಾಳೆಯನ್ನು ಜೆಸ್ಸೋ ವರ್ಕ್ ಮಾಡಿದ ಜಾಗಗಳಲ್ಲಿ ಅಂಟಿಸಬೇಕು. ಉಳಿದ ಜಾಗಗಳನ್ನು ಪೇಂಟ್ ಮಾಡಿದರೆ ಸುಂದರ ಕಲಾಕೃತಿ ಸೃಷ್ಟಿಯಾಗುತ್ತದೆ. ನಂತರ ಚಿತ್ರಕ್ಕೆ ಅನುಗುಣವಾಗಿ ಅಂದವಾದ ಫ್ರೇಮ್ ಹಾಕಬೇಕು' ಎಂದರು.

'ಒಳ್ಳೆಯ ಗುಣಮಟ್ಟದ ಕಾರ್ಡ್‌ಬೋರ್ಡ್‌ಅನ್ನೇ ಆರಿಸಿಕೊಳ್ಳಬೇಕು. ಇಲ್ಲವಾದರೆ ವರ್ಷಗಳು ಕಳೆದಂತೆ ಬೋರ್ಡ್‌ನಿಂದ ಮರ ಪುಡಿ ಪುಡಿಯಾಗಿ ಉದುರುವ ಸಂಭವವಿದೆ' ಎಂದು ಎಚ್ಚರಿಸುತ್ತಾರೆ ಪದ್ಮಾ.

ಈ ಕುಸುರಿ ಕೆಲಸ ಮಾಡಲು ಸಮಯ ಮತ್ತು ಶ್ರದ್ಧೆ ಅತ್ಯವಶ್ಯ. ಮನಸ್ಸನ್ನು ಏಕಾಗ್ರತೆಯಲ್ಲಿಟ್ಟುಕೊಳ್ಳಬೇಕು. ಒಂದು ಸುಂದರ ಕಲಾಕೃತಿ ಮೂಡಲು ಕಲಾವಿದ ತನು ಮನ ಧನವನ್ನೆಲ್ಲ ಅರ್ಪಿಸಬೇಕಾಗುತ್ತದೆ. ಈ ಕಲೆ ಸ್ವಲ್ಪ ದುಬಾರಿ. ಒಂದು ಚಿನ್ನದ ಹಾಳೆಗೆ (ಒಂದು ಬುಕ್ ಅಂದರೆ 25 ಶೀಟ್) 1500 ರಿಂದ 1700 ರೂಪಾಯಿ ಆಗುತ್ತದೆ. ಉತ್ತಮ ಗುಣಮಟ್ಟದ ಹಲವಾರು ಪಾಯಿಂಟ್‌ಗಳುಳ್ಳ ಬ್ರಶ್‌ಗಳು ಅವಶ್ಯಕ.



'ಇದು ಬೇರೆ ಚಿತ್ರಕಲೆಗಿಂತ ಭಿನ್ನ. ಏಕೆಂದರೆ, ಇಲ್ಲಿ ಪ್ರತಿಯೊಂದು ಚಿತ್ರವೂ ರಾಮಾಯಣ, ಮಹಾಭಾರತ, ಭಗವದ್ಗೀತೆಯ ಕಥೆಗಳನ್ನು ಸಾರುತ್ತವೆ. ಹಾಗಾಗಿ ಈ ಕಲೆಯಲ್ಲಿ ಆಸಕ್ತಿ ಇದ್ದವರು ಗುರುಗಳ ಮುಖಾಂತರ ಕಲಿಯುವುದು ಒಳ್ಳೆಯದು. ಹಾಗೆಯೇ ವೃತ್ತಿಯಾಗಿಯೂ ನೆಲೆ ಕಾಣಬಹುದು. ಎಲ್ಲಕ್ಕಿಂತ ಮುಖ್ಯವಾಗಿ ಕಾಲಗರ್ಭದಲ್ಲಿ ಕಳೆದು ಹೋಗುತ್ತಿರುವ ಸಾಂಪ್ರದಾಯಕ ಶೈಲಿ ಕಲೆಯನ್ನು ಕಿಂಚಿತ್ತಾದರೂ ಉಳಿಸಿದ ಸಾರ್ಥಕ ಭಾವನೆ ಸಿಗುತ್ತದೆ' ಎನ್ನುವುದು ಪದ್ಮಾ ಅವರ ಸ್ಪಷ್ಟನುಡಿ.

ಪದ್ಮಾ ಅವರು ಈವರೆಗೆ ಸುಮಾರು 150 ಕಲಾಕೃತಿಗಳನ್ನು ತಮ್ಮ ಕುಂಚದಿಂದ ಹೊರ ತಂದಿದ್ದಾರೆ. ಇವರ ಚಿತ್ರಗಳನ್ನು ಮೆಚ್ಚಿದ ಹಲವರು ಸಾಗರದಾಚೆಗೂ ಕೊಂಡೊಯ್ದಿದ್ದಾರೆ. 'ತುಂಬಾ ಅಪರೂಪದ ಚಿತ್ರಗಳು ಸಾವಿರದಿಂದ ಲಕ್ಷ ರೂಪಾಯಿ ಬೆಲೆ ಬಾಳುತ್ತವೆ' ಎನ್ನುತ್ತಾರೆ. ಹಲವಾರು ಪ್ರಶಸ್ತಿ ಪುರಸ್ಕಾರಗಳು ಇವರಿಗೆ ಸಂದಿವೆ. 'ಆತ್ಮತೃಪ್ತಿಗಾಗಿ ಇದು ಹವ್ಯಾಸ. ಆಸಕ್ತರಿಗೆ ಹೇಳಿಕೊಡಲು ಸದಾ ಸಿದ್ಧ' ಎನ್ನುತ್ತಾರೆ. ಬೆಂಗಳೂರಿನ ಮಲ್ಲೇಶ್ವರಂನಲ್ಲಿರುವ ವೆಂಕಟಪ್ಪ ಗ್ಯಾಲರಿಯಲ್ಲಿ ಎರಡು ಬಾರಿ ಏಕವ್ಯಕ್ತಿ ಪ್ರದರ್ಶನ ನೀಡಿದ್ದಾರೆ.

ಪದ್ಮಾ ಅವರು ಹವ್ಯಾಸಿ ಬರಹಗಾರ್ತಿ ಕೂಡಾ. ಹಲವಾರು ಪತ್ರಿಕೆಗಳಿಗೆ ಕೃಷಿ ಸಂಬಂಧಿ ಲೇಖನಗಳನ್ನು ಬರೆದಿದ್ದಾರೆ. ಸದ್ಯ, ಮನಸ್ಸಿಗೆ ಶಾಂತಿ, ನೆಮ್ಮದಿ ಕೊಡುವ ಪುಟ್ಟ ಕೈತೋಟ ಮಾಡಿಕೊಂಡಿದ್ದು, ಮನೆಗೆ ಬೇಕಾಗುವಷ್ಟು ಸೊಪ್ಪು, ತರಕಾರಿಗಳನ್ನು ಬೆಳೆದುಕೊಳ್ಳುತ್ತಾರೆ. ಪದ್ಮಾರ ಸಂಪರ್ಕ ಸಂಖ್ಯೆ: 97400-65735.

## ಏನಿದು ಮೈಸೂರು ಶೈಲಿ?

ಮೈಸೂರು ಸಾಂಪ್ರದಾಯಕ ಶೈಲಿಯ ಕಲೆ ಆರಂಭವಾಗಿದ್ದು 15-16ನೇ ಶತಮಾನದಲ್ಲಿ. ವಿಜಯನಗರ ಅರಸರ ಮತ್ತು ಮೈಸೂರು ರಾಜರ ಆಳ್ವಿಕೆಯಲ್ಲಿ ಈ ಕಲೆಗೆ ಒಳ್ಳೆಯ ಸ್ಥಾನ ದೊರಕಿತ್ತು. ಅರಸರ ಅಪ್ಪಣೆಯಂತೆ ಕಲಾವಿದರು ಆಸ್ಥಾನದಲ್ಲಿ ಅಗ್ರಸ್ಥಾನ ಪಡೆದ ವ್ಯಕ್ತಿಗಳ ಚಿತ್ರಗಳು ಹಾಗೂ ರಾಮಾಯಣ– ಮಹಾಭಾರತದ ಕಥೆಯ ಚಿತ್ರಗಳನ್ನು ಬರೆಯುತ್ತಿದ್ದರು. ಕೆಲವು ಶ್ರೀಮಂತರು ತಮ್ಮ ಅರಸರ ಭಾವಚಿತ್ರಗಳನ್ನು ಬರೆಯಿಸುತ್ತಿದ್ದರು.

## ಶ್ರಮಕ್ಕೆ ಸಂದ ಪುರಸ್ಕಾರ

★ 1990 ರಲ್ಲಿ ಆರೆಂಜ್ ಕೌಂಟಿ ಮಣಿಪಾಲ್‌ನಲ್ಲಿ ನಡೆದ ಸ್ಪರ್ಧೆಯಲ್ಲಿ ಪ್ರಶಸ್ತಿ.

★ 1994ರಲ್ಲಿ ನಡೆದ ಅಖಿಲ ಭಾರತ ಸ್ಪರ್ಧೆಯಲ್ಲಿ ರಾಜ್ಯಮಟ್ಟದ ಪ್ರಶಸ್ತಿ.

★ 2010ರಲ್ಲಿ ಕಿನ್ನಾಳ ಹ್ಯಾಂಡಿಕ್ರಾಫ್ಟ್ ಕಲಾ ಅಕಾಡೆಮಿ, ಚಿತ್ರಕಲಾ ಪರಿಷತ್, ಬೆಂಗಳೂರಿನಲ್ಲಿ ನಡೆಸಿದ ವಸ್ತು ಪ್ರದರ್ಶನದಲ್ಲಿ 'ಶ್ರೀರಾಮ ಪಟ್ಟಾಭಿಷೇಕ'ದ ಚಿತ್ರಕಲೆಗೆ ಬಹುಮಾನ.